ಕೊಟ್ಟು ಅವರ ಹಿಂದುಗಡೆ ಹೋಗಿ ಕುಳಿತಿರುತ್ತಾರೆ ಎಂದು ಅನೇಕ ದೂರುಗಳು ಬಂದಿದೆ. ಇದರ ಬಗ್ಗೆ ತಾವು ಬಹಳ ಎಚ್ಚರಿಕೆಯಿಂದ ಕಟ್ಟುನಿಟ್ಟಾಗಿ ಆದೇಶವನ್ನು ಕೊಟ್ಟು ಅಂತಹ ಬಸ್‌ಗಳಲ್ಲಿ ಚಾಲಕರು ಹಿಂದುಗಡೆ ಕುಳಿತುಕೊಂಡು ಖಾಸಗಿಯವರಿಗೆ ಬಸ್‌ನಲ್ಲಿ ಪ್ರಯಾಣ ಮಾಡತಕ್ಕ ಂಥ ಪ್ರಯಾಣಿಕರಿಗೆ, ಯುವಕರಿಗೆ ಬಸ್ ಒಡಿಸುವುದಕ್ಕೆ ಅವಕಾಶ ಎನು ಮಾಡಿಕೊಡುತ್ತಾರೆ, ಅಂತಹವುಗಳನ್ನು ತಾವು ಪರಿಶೀಲನೆ ಮಾಡಿ ಅಂತಹವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಕೊನೆಯದಾಗಿ ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಸದಸ್ಯರು ಒಳ್ಳೆಯ ಸಲಹ ಕೊಟ್ಟಿದ್ದಾರೆ. ನಾವು ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಯಾವುದೇ ರೀತಿಯ ಕಂಪ್ಲೆಂಟ್ ಬರದಂತೆ ವ್ಯವಸ್ಥೆ ಮಾಡುತ್ತೇವೆ.

ಅಯೋಧ್ಯೆ ಘಟನೆಯ ಹಿನ್ನೆಲೆಯಲ್ಲಿ ನಡೆದ ಮತೀಯ ಗಲಭೆ

283 (1486) ಶ್ರೀ ನಸೀರ್ ಅಹಮ್ಮದ್ (ಬಿನ್ನಿಪೇಟೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಅಯೋಧ್ಯ ಘಟನೆಯ ಹಿನ್ನಲೆಯಲ್ಲಿ ಇತ್ತೀಚಿಗೆ ನಡೆದ ಮತೀಯ ಗಲಭೆಯಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು ?

ಆ) ಅಂತಹವರಿಗೆ ಇದುವರೆಗೆ ನೀಡಲಾದ ಪರಿಹಾರಧನ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು).

ಇ) ಸದರಿ ಗಲಭೆಯಲ್ಲಿ ಅಂಗವಿಕಲರಾದವರ ಸಂಖ್ಯೆ ಹಾಗೂ ಅವರುಗಳಿಗೆ ನೀಡಲಾದ ಪರಿಹಾರಧನ ಎಷ್ಟು? (ಜಿಲ್ಲಾವಾರು ವಿವರ ನೀಡುವುದು).

ಈ) ಸದರಿ ಗಲಭೆಯಲ್ಲಿ ಗಾಯಗೊಂಡವರ ಸಂಖ್ಯೆ ಹಾಗೂ ಅವರುಗಳಿಗೆ ನೀಡಲಾದ ಪರಿಹಾರಧನ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು).

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಮೃತಪಟ್ಟವರ ಸಂಖ್ಯೆ 78. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಆ) ಮೃತಪಟ್ಟವರ ಕುಟುಂಬದವರಿಗೆ ಇದುವರೆಗೆ ಒಟ್ಟು 118 ಲಕ್ಷ ರೂಪಾಯಿ ಪರಿಹಾರಧನ ವಿತರಿಸಲಾಗಿದೆ. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಇ) 1) ಶಾಶ್ವತ ಅಂಗವಿಕರಾದವರ ಸಂಖ್ಯೆ 10 ಹಾಗೂ ಅವರಿಗೆ ನೀಡಲಾದ ಪರಿಹಾರಧನ ರೂ. 1,50,000-00.

2) ತಾತ್ಕಾಲಿ ಅಂಗವಿಕಲರಾದವರ ಸಂಖ್ಯೆ 193 ಹಾಗೂ ಅವರಿಗೆ ನೀಡಲಾದ ಪರಿಹಾರಧನ ರೂ. 4,82,500.00. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಈ) ಗಾಯಗೊಂಡವರ ಸಂಖ್ಯೆ 408 ಹಾಗೂ ಅವರುಗಳಿಗೆ ನೀಡಲಾದ ಒಟ್ಟು ಪರಿಹಾರಧನ ರೂ. 3,07,000.00. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಶ್ರೀ ನಜೀರ ಅಹಮದ್ :- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರ

ಅನುಬಂಧ

ಸಂಖ್ಯೆ ಹೆಚ್‌ಡಿ 331 ಎಸ್ ಎಸ್‌ಟಿ 93

ಕ್ರಮ ಸಂಖ್ಯೆ	ಜಿಲ್ಲೆ	ಮೃತ ಪಟ್ಟವರು	ನೀಡಲಾದ ಪರಿಹಾರಧನ (ರೂ. ಗಳಲ್ಲಿ)	ಶಾಶ್ವತವಾಗಿ ಅಂಗವಿಕಲರಾದ ವರಸಂಖ್ಯೆ	ನೀಡಲಾದ ಪರಿಹಾರಧನ (ರೂ. ಗಳಲ್ಲಿ)	ತಾತ್ಕಾಲಿಕ ಅಂಗವಿಕಲರಾದ ವರಸಂಖ್ಯೆ	ನೀಡಲಾದ ಪರಿಹಾರಧನ (ರೂ. ಗಳಲ್ಲಿ)	ಗಾಯಗೊಂಡವರ ಸಂಖ್ಯೆ	ನೀಡಲಾದ ಪರಿಹಾರಧನ (ರೂ. ಗಳಲ್ಲಿ)
1.	ಬಿಜಾಪುರ	–	–	–	–	–	–	9	–
2.	ಬೀದರ	10	20,00,000.00	–	–	81	2,02,500.00	–	–
3.	ಬೆಳಗಾವಿ	1	2,00,000.00	–	–	2	5,000.00	–	–
4.	ಬಳ್ಳಾರಿ	–	–	–	–	–	–	–	–
5.	ಬೆಂಗಳೂರು ನಗರ ಜಿಲ್ಲೆ	–	–	–	–	–	–	–	–
6.	ಬೆಂಗಳೂರು ಗ್ರಾಮಾಂತರ ಜಿಲ್ಲೆ	1	1,00,000.00	–	–	–	–	5	2,000.00
7.	ಬೆಂಗಳೂರು ನಗರ	19	19,00,000.00	5	75,000.00	75	1,87,500.00	235	1,00,000.00
8.	ಚಿತ್ರ ದುರ್ಗ	3	6,00,000.00	–	–	–	–	6	5,000.00
9.	ಚಿಕ್ಕಮಗಳೂರು	–	–	–	–	–	–	2	–

10.	ಧಾರವಾಡ	9	9,00,000.00	–	–	–	–	18	19,000.00
11.	ದಕ್ಷಿಣ ಕನ್ನಡ	6	12,00,000.00	4	60,000.00	23	57,500.00	26	39,000.00
12.	ಗುಲ್ಬರ್ಗಾ	12	21,00,000.00	–	–	10	25,000.00	17	27,000.00
13.	ಹಾಸನ	–	–	–	–	–	–	–	–
14.	ಕೋಲಾರ	–	–	–	–	–	–	6	26,500.00
15.	ಕೊಡಗು	–	–	–	–	–	–	–	–
16.	ಮಂಡ್ಯ	2	4,00,000.00	–	–	–	–	7	3,000.00
17.	ಮೈಸೂರು	9	18,00,000.00	–	–	1	2,500.00	54	60,000.00
18.	ರಾಯಚೂರು	–	–	–	–	–	–	–	–
19.	ಶಿವಮೊಗ್ಗ	–	–	–	–	–	–	–	–
20.	ತುಮಕೂರು	6	6,00,000.00	1	15,000.00	1	2,500.00	23	25,500.00
21.	ಉತ್ತರ ಕನ್ನಡ	–	–	–	–	–	–	–	–
	ಒಟ್ಟು	78	1,18,00,000.00	10	1,50,000.00	193	4,82,500.00	408	3,07,000.00

ಸಂಪೂರ್ಣವಾಗಿ ಸಿಕ್ಕಿಲ್ಲ.Number of persons injured and the compensation paid ಎಂದು ಕೇಳಿದ್ದಕ್ಕೆ ಉತ್ತರವಾಗಿ ಬೆಂಗಳೂರು ನಗರದಲ್ಲಿ ಸುಮಾರು 235 ಜನ ಗಾಯಗೊಂಡಿದ್ದಾರೆ. ಅವರಿಗೆ ಸರ್ಕಾರ ಸುಮಾರು 1 ಲಕ್ಷ ರೂಪಾಯಿಗಳ ಪರಿಹಾರ ಧನ ಕೊಟ್ಟಿದೆ. ಅದೇ ರೀತಿ ಕೋಲಾರದಲ್ಲಿ ಬರಿ 6 ಜನರು ಗಾಯಗೊಂಡಿದ್ದಕ್ಕೆ ಪರಿಹಾರವಾಗಿ 26,500 ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಡಿಸ್ಕ್ರಿಮಿನೇಷನ್ ನೋಡಿದರೆ it is very glaring ಕಾರಣ, ತಾವು ರಾಜ್ಯಪಾಲರ ಭಾಷಣದಲ್ಲಿಯೂ ಸಹ those who are injured ಅವರಿಗೆ 15 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಬೆಂಗಳೂರಿನಲ್ಲಿ there is not even a single case, and even where there are grevious injuries they have paid only Rs. 500, 1000, 1500, 2000 and 2500 maximum. But where as ಕೋಲಾರದಲ್ಲಿ ಗಾಯಗೊಂಡ ಒಬ್ಬರಿಗೆ 15,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಇಡೀ ರಾಜ್ಯದಲ್ಲಿ 500 ರೂ. 1000 ರೂ. 1500 ರೂಪಾಯಿಗಳಂತೆ ಕೊಟ್ಟಿದ್ದಾರೆ. ಇದು ಗ್ಲೇರಿಂಗ್ ಆಗಿ ಇಲ್ಲಿ ಕಾಣುತ್ತಿದೆ. ಬೆಂಗಳೂರಿನಲ್ಲಿ 235 ಜನರು ಗಾಯಗೊಂಡಿದ್ದಾರೆ, ಅವರಿಗೆ ಪರಿಹಾರ ಧನವಾಗಿ ಸುಮಾರು 1 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೋಲಾರದಲ್ಲಿ ಗಾಯಗೊಂಡ ಬರಿ 6 ಜನರಿಗೆ ಪರಿಹಾರ 26,000 ರೂಪಾಯಿಗಳನ್ನು ಕೊಟ್ಟಿರುವುದು ಗ್ಲೇರಿಂಗ್ ಆಗಿ ಕಾಣುತ್ತಿದೆ. ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರ ಕೊಟ್ಟಿದ್ದೇನೆ. ಮತೀಯ ಗಲಭೆ ನಡೆದು ದೇಹಗಳನ್ನು ಹೂಳಿದಾಗ ಅಲ್ಲೊಂದು ದೇಹ ಸಿಕ್ಕಿತು. ಆ ದೇಹವನ್ನು ಪೋಲೀಸ್ ಅಧಿಕಾರಿಗಳು ನನ್ನ ಮುಂದೆ ತೆಗೆದು ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು. ಇವೊತ್ತಿನವರೆವಿಗೂ ಅವರ ಸಂಬಂಧಿಕರಿಗೆ ಪರಿಹಾರ ಕೊಟ್ಟಿಲ್ಲ. ಗಲಭೆಗಳಲ್ಲಿ ಸತ್ತವರಿಗೆ ಹಿಂದೆ ಒಂದು ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು, ಈಗ ಎರಡು ಲಕ್ಷ ರೂಪಾಯಿಗಳಿಗೆ ಸರ್ಕಾರ ಏರಿಸಿದೆ. ಈ ಪರಿಹಾರ ಹಣ ಬೆಂಗಳೂರಿನ ಆರು ಜನರಿಗೆ ಇನ್ನೂ ಮುಟ್ಟಿಲ್ಲ. ಇದರ ಬಗ್ಗೆ ತಾವು ಸರ್ಕಾರಿ ಆದೇಶ ಹೊರಡಿಸಿ ಸುಮಾರು 15-20 ದಿವಸಗಳಾದವು. ಆದರೂ ಇನ್ನೂ ಹಣ ತಲುಪಿಲ್ಲ. ಆದೇ ರೀತಿ ತಮ್ಮ ಉತ್ತರದಲ್ಲಿ 10 ಜನರು ಶಾಶ್ವತ ಅಂಗವಿಕಲರಾಗಿದ್ದಾರೆಂದು ತಿಳಿಸಿದ್ದೀರಿ. According to the government of India norms incapacitated ಆಗಿರುವವರಿಗೆ 50,000 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ. ಶಾಶ್ವತ ಅಂಗವಿಕಲರಾದವರಿಗೆ ಪರಿಹಾರ ಧನವಾಗಿ 1 ಲಕ್ಷ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಒಬ್ಬರಿಗೆ 50 ಸಾವಿರ ರೂಪಾಯಿಗಳೆಂದರು 10 ಜನರಿಗೆ 5 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅದೇ ರೀತಿ ಕೆಲವು ಗಾಯಗೊಂಡ ನಂತರ ಶಾಶ್ವತವಾಗಿ ಅಂಗವಿಕಲರಾಗಿದ್ದಾರೆ. They are incapacitated after grevious injury and their legs have been totally amputated and some are limping. ಅದರ ಬಗ್ಗೆ ತಾವು ದಯವಿಟ್ಟು ಒಂದು ತನಿಖೆ ನಡೆಸಿ, and they have to be considered as permanently incapacitated .

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೆ, ಮೃತ ಹೊಂದಿದ ಕುಟುಂಬದವರಿಗೆ ಪರಿಹಾರ ಧನವಾಗಿ 1 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಹಿಂದೆ ಇತ್ತು. ಅನಂತರ ಅದನ್ನು 2 ಲಕ್ಷ ರೂಪಾಯಿಗಳಿಗೆ ಏರಿಸಲಾಗಿದೆ. ಈಗ ನಾವು ಸುಮಾರು 38 ಜನರಿಗೆ ಪರಿಹಾರ ಧನ ಕೊಡಬೇಕಾಗಿದೆ, ಈಗಾಗಲೇ ಹಣ ಬಿಡುಗಡೆ ಮಾಡಲಾಗಿದೆ. ಅದು ಪ್ರೊಸೆಸ್‌ನಲ್ಲಿದೆ. ಆದ್ದರಿಂದ, ತಕ್ಷಣ ಪೇಮೆಂಟ್ ಮಾಡಿಸುತ್ತೇವೆ. ತಾವು 'ದೇಹ ಸ್ಮಶಾನದಲ್ಲಿ ಸಿಕ್ಕಿತು' ಎಂದು ಏನು

ಹೇಳಿದ್ದೀರಿ ಇದರ ಬಗ್ಗೆ ಈಗಾಗಲೆ ನಿರ್ದೇಶನ ಕೊಟ್ಟಿದ್ದು , ಅವರ ಕುಟುಂಬದವರಿಗೂ ತಕ್ಷಣ ಪೇಮಂಟ್ ಮಾಡುತ್ತೇವೆ. ಈಗಿರುವ ಮಾರ್ಗದರ್ಶನದ ಪ್ರಕಾರ ಶಾಶ್ವತವಾಗಿ ಅಂಗವಿಕಲರಾದವರಿಗೆ ಗರಿಷ್ಟ ಮೊತ್ತ 15,000 ರೂಪಾಯಿಗಳನ್ನು ಕೊಡಬೇಕೆಂದಿದೆ. ಆ ಹಣವನ್ನು ಇನ್ನು ಹೆಚ್ಚು ಮಾಡಬೇಕಾಗುತ್ತದೆ. ಅದನ್ನು ನಾವು ಕೇಸ್ ಬೈ ಕೇಸ್ ರಿವ್ಯು ಮಾಡುತ್ತೇವೆ. ಅಲ್ಲದೆ, ಗಾಯಗೊಂಡವರಿಗೆ 2000 ರೂ, 3000 ರೂಪಾಯಿಗಳನ್ನು ಕೊಡಬಹುದು. ಇದನ್ನು ನಾವು ರಿವ್ಯು ಮಾಡುತ್ತೇವೆ. ನಂತರ ಯಾರ್ಯಾರಿಗೆ ಎಲ್ಲೆಲ್ಲಿ ನೈಜಾವಾದು ಗಾಯವಾಗಿದೆ ಶಾಶ್ವತವಾಗಿ ಅಂಗವಿಕಲರಾಗದಂಥ ಜನರಿಗೆ ಕೂಡ ಅವರವರ ಪರಿಸ್ಥಿತಿಗೆ ಅನುಗುಣವಾಗಿ ರಿವ್ಯೂ ಮಾಡಿ ಪೇಮೆಂಟ್ ಜಾಸ್ತಿ ಮಾಡಿಸುತ್ತೇವೆ. ಶಾಶ್ವತ ಅಂಗವಿಕಲರಾದವರಿಗೂ ಕೂಡ ನನ್ನ ದೃಷ್ಟಿಯಲ್ಲಿ ಜಾಸ್ತಿ ಮಾಡಬೇಕಾಗುತ್ತದೆ. ಮೊದಲು ಶಾಶ್ವತ ಅಂಗವಿಕಲರಾಗದ್ದಿದ್ದರೂ ಕೂಡ ಅನಂತರ ಆಗಿದ್ದಾರೆ. ಇಂತಹ ನಿದರ್ಶನಗಳು ಇರುವುದರಿಂದ ಅದನ್ನು ಕೂಡ ರಿವ್ಯು ಮಾಡಿಸುತ್ತೇನೆ. ಇವೆಲ್ಲದರ ಬಗ್ಗೆ ರಿವ್ಯೂ ಮಾಡಿಸಿ ಕಡಿಮೆ ಪರಿಹಾರ ಧನ ಕೊಟ್ಟವರಿಗೆ ಹೆಚ್ಚು ಮಾಡುವುದಕ್ಕೆ ಮತ್ತು ಶಾಶ್ವತ ಅಂಗವಿಕಲರಾದವರಿಗೆ ಕೂಡ ಹೆಚ್ಚು ಪರಿಹಾರ ಧನ ಕೊಡತಕ್ಕಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲದೆ ಅವರನ್ನು ಪುನರ್ವಸತಿಗೊಳಿಸುವುದಕ್ಕೆ ಬೇರೆ ಕಾರ್ಯಕ್ರಮವಿರುವುದರಿಂದ ಅದನ್ನು ವಿಶೇಷ ರೀತಿಯಲ್ಲಿ ಸಜ್ಜುಗೊಳಿಸುತ್ತೇವೆ.

ಡಾ : ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ನಜೀರ್ ಅಹಮದ್‌ರವರು ಒಂದು ಪ್ರಶ್ನೆ ಕೇಳಿದರು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒಂದು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ. ಒಬ್ಬ ವ್ಯಕ್ತಿ ಸತ್ತ ತಕ್ಷಣ ಆತನ ಕುಟುಂಬದವರಿಗೆ 2 ಲಕ್ಷ ರೂಪಾಯಿಗಳನ್ನು ಸರ್ಕಾರ ಪರಿಹಾರ ಧನವಾಗಿ ಕೊಡುತ್ತದೆ. ಆದರೆ ನಮ್ಮ ಜನರು ಕೆಲವರು ಇದ್ದರೂ ಸತ್ತವರಂತೆ ಇರುತ್ತಾರೆ. ಬಹಳಷ್ಟು ಜನರು ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ನಮ್ಮ ಪಕ್ಷದ ಸರ್ಕಾರ ಇದ್ದಾಗ ಸತ್ತ ವ್ಯಕ್ತಿಯ ಕುಟುಂಬದವರಿಗೆ 1 ಲಕ್ಷ 50 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೆವು, ನಂತರ ಬಂದ ಸರ್ಕಾರ 1 ಲಕ್ಷ ರೂಪಾಯಿ ಕೊಟ್ಟಿತು. ಈಗ ನೀವು ಅಧಿಕಾರ ವಹಿಸಿಕೊಂಡಾಗಿನಿಂದ ಇನ್ನು ಧಾರಾಳವಾಗಿ 2 ಲಕ್ಷ ರೂಪಾಯಿಗಳನ್ನು ಪರಿಹಾರ ಧನವಾಗಿ ಕೊಟ್ಟಿರಿ. ಇದು ಅನುಕಂಪದ ದೃಷ್ಟಿಯಿಂದ, ಅವರ ಕುಟುಂಬದ ದೃಷ್ಟಿಯಿಂದ ಸರಿಯಾಗಿದೆ. ಆದರೆ ಗಾಯಾಳುಗಳಾಗಿ ಇದ್ದೂ ಸಾಯುತ್ತಾರಲ್ಲ ಅವರು ಆಸ್ಪತ್ರೆ ಸೇರಿ ಅಲ್ಲಿ ಅವರಿಗೆ ಬೇಕಾಂಥ ಔಷಧಿ ಸಿಗುವುದಿಲ್ಲ. Grevious injuries ಎನ್ನುತ್ತಾರಲ್ಲಾ, ಅವರು totally permanently incapacitated ಆದಾಗ ಆಗ ಏನು ಮಾಡುತ್ತೀರಿ? ನೀವು ಅವರಿಗೆ 15,000 ರೂಪಾಯಿಗಳನ್ನು ಕೊಡುತ್ತೀರಿ ಒಂದನೆಯದು ಅವರ ಕುಟುಂಬ ಅವರ ಮೇಲೆ ಹೊಂದಿಕೊಳ್ಳಬೇಕಾಗುತ್ತದೆ ಇನ್ನೊಂದು, ಜೀವನಪರ್ಯಂತ ಅವರು ನರಳಬೇಕಾಗುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರ ಪೂರ್ಣವಾಗಿ ವಿಷಧವಾಗಿ ವಿಚಾರ ಮಾಡಿ ಏನಾದರೂ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ :- ತಾವು ಹೇಳ್ಕಿದ್ದು ಬಹಳ ಸೂಕ್ತವಾಗಿದೆ. ಶಾಶ್ವತವಾಗಿ ಅಂಗವಿಕಲರಾದವರಿಗೆ ಸಂಪಾದನೆ ಮಾಡುವುದಕ್ಕೆ ಸಾಧ್ಯವೇ ಇಲ್ಲವೆಂದಾಗ ಅವರಿಗೆ ತಿಂಗಳಿಗೆ 250 ರೂಪಾಯಿಗಳಂತೆ ಮಾಸಾಶನ ಕೊಡುತ್ತೇವೆ. ಇದು ಹೊಸ ಯೋಜನೆ ಯಲ್ಲಿದೆ. ಆಲ್ಲದೆ, ಅವರ ಹತ್ತಿರದ ಸಂಬಂಧಕರು ಯಾರಾದರು ಇದ್ದರೆ ಅವರಿಗೆ ಕೆಲಸ ಕೊಡಿಸ ತಕ್ಕಂಥ ಕಾರ್ಯಕ್ರಮವನ್ನು ಈ ಯೋಜನೆಯಲಿ ಹಮ್ಮಿಕೊಂಡಿದ್ದೇವೆ. ಆದುದರಿಂದ, ತಾವು ಹೇಳಿದ್ದುದ್ದು ಸರಿಯಾಗಿದೆ.

ಏಕೆಂದರೆ, ಇದ್ದರೂ ಸತ್ತಂತಿರುವ ಜನರ ಬಗ್ಗೆ ನಾವು ಇನ್ನು ಹೆಚ್ಚು ಮಾನವೀಯತೆ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅದಕ್ಕಾಗಿ ಅವರಿಗೆ ನಾವು ಮಾಸಾಶನ ಕೊಡುತ್ತಿದ್ದೇವೆ, ಮತ್ತು ಅವರಿಗೆ ಪರಿಹಾರ ಧನವಾಗಿ ಕೊಡುತ್ತಿರುವ 15,000 ರೂಪಾಯಿಗಳು ಸಾಕಾಗುವುದಿಲ್ಲವೆಂದರೆ ಇನ್ನೂ ಹೆಚ್ಚು ಮಾಡತಕ್ಕಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಮಾನ್ಯ ಬಸವರಾಜುರವರೆ, ನಿಮ್ಮ 284 (1747) ನೇ ಪ್ರಶ್ನೆಗೆ ಉತ್ತರ ಕೊಡಲು ಮಾನ್ಯ ಮುಖ್ಯಮಂತ್ರಿಗಳು 15 ದಿವಸಗಳು ಕಾಲಾವಕಾಶ ಕೇಳಿರುವುದರಿಂದ ಮುಂದೆ ಈ ಪ್ರಶ್ನೆ ತೆಗೆದುಕೊಳ್ಳುತ್ತೇನೆ.

ಗುಬ್ಬಿ ತಾಲ್ಲೂಕು ನಿಟ್ಟೂರಿನಲ್ಲಿ ಪೋಲೀಸ್ ಠಾಣೆ

285 (1648) ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಗುಬ್ಬಿ ತಾಲ್ಲೂಕು ನಿಟ್ಟೂರು ಗ್ರಾಮವು ನಾಲ್ಕು ಹೆದ್ದಾರಿಗಳನ್ನು ಕೂಡಿರುವ ಸ್ಥಳವಲ್ಲವೇ ?

ಆ) ನಿಟ್ಟೂರಿನಲ್ಲಿ ಪೋಲೀಸ್ ಠಾಣೆ ತೆಗೆಯುವ ಬಗ್ಗೆ ವಿಧಾನ ಸಭೆಯಲ್ಲಿ ಸರ್ಕಾರ ಒಪ್ಪಿಗೆ ಕೊಟ್ಟಿದ್ದು ನಿಜವಲ್ಲವೇ, ಹಾಗಾದರೆ ಯಾವಾಗ ಪೋಲೀಸ್ ಠಾಣೆ ತೆರೆಯಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ವಿಧಾನ ಸಭೆಯಲ್ಲಿ ಸರ್ಕಾರ ಒಪ್ಪಿಗೆ ಕೊಟ್ಟಿರುವುದಿಲ್ಲ. ಮಾನ್ಯ ಸದಸ್ಯರ ಮನವಿ ಸರ್ಕಾರದ ಮುಂದಿದ್ದು ಆದ್ಯತೆ, ಅಗತ್ಯತೆ ಹಾಗೂ ಸಂಪನ್ಮೂಲಗಳನ್ನು ಆಧರಿಸಿ ಮುಂಬರುವ ವರ್ಷಗಳಲ್ಲಿ ಪರಿಶೀಲಿಸಲಾಗುವುದು.

ಶ್ರೀ ಜಿ. ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೆ, ನಾನು ಶಾಸಕನಾದ ನಂತರ ಸುಮಾರು 4-5 ಸಲ ಈ ಪ್ರಶ್ನೆಯನ್ನು ವಿಧಾನ ಸಭೆಯಲ್ಲಿ ಕೇಳಿದ್ದೇನೆ. ಹೋದ ಸಲ ಶ್ರೀ ಧರ್ಮಸಿಂಗ್‌ರವರು ಗೃಹ ಸಚಿವರಾಗಿದ್ದಂಥ ಸಂದರ್ಭದಲ್ಲಿ ಜಿಲ್ಲೆಯಿಂದ ವರದಿ ತರಿಸಿ ಗುಬ್ಬಿ ತಾಲ್ಲೂಕಿನ ನಿಟ್ಟೂರು ಗ್ರಾಮಕ್ಕೆ ಪೋಲೀಸ್ ಠಾಣೆ ತೆರೆಯಬೇಕಾಗಿದೆಯೆಂದು ತಿಳಿಸಿದಾಗ ಅದನ್ನು ಮಾಡಿಕೊಡುವುದಾಗಿ ಹೇಳಿದ್ದರು. ಆದರೆ, ಈಗ ತಮ್ಮ ಉತ್ತರದಲ್ಲಿ ವಿಧಾನ ಸಭೆಯಲ್ಲಿ ಸರ್ಕಾರ ಒಪ್ಪಿಗೆ ಕೊಟ್ಟಿರುವುದಿಲ್ಲ, ಮಾನ್ಯ ಸದಸ್ಯರ ಮನವಿ ಸರ್ಕಾರದ ಮುಂದಿದ್ದು ಆದ್ಯತೆ, ಅಗತ್ಯತೆ ಹಾಗೂ ಸಂಪನ್ಮೂಲಗಳನ್ನು ಆಧರಿಸಿ ಮುಂಬರುವ ವರ್ಷಗಳಲ್ಲಿ ಪರಿಶೀಲಿಸಲಾಗುವುದು. ಎಂದು ಹೇಳಿದ್ದಾರೆ. ಈ ರೀತಿಯಾಗಿ ಪ್ರಶ್ನೆಗಳಿಗೇ ಉತ್ತರ ಬಂದರೆ ನಾವು ವಿಧಾನ ಸಭೆಯಲ್ಲಿ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ತಮಗೆ ಯಾರು ಕಳುಹಿಸಿಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ನಾನು ಈ ಹಿಂದೆ ಇದೇ ಪ್ರಶ್ನೆ ಕೇಳಿ ಒಂದು ವರ್ಷವಾಗಿಲ್ಲ, ಈಗ ಈ ರೀತಿ ಉತ್ತರ ಕೊಟ್ಟರೆ ನಾವೇನು ಮಾಡಬೇಕು ? ಸರ್ಕಾರದವರು ವರದಿಯನ್ನು ತರಿಸಿಕೊಂಡಿದ್ದು, ಅಲ್ಲಿ ಪೋಲೀಸ್ ಠಾಣೆ ತೆರೆಯುವುದು ಬಹಳ ಅವಶ್ಯಕತೆಯಿದೆಯೆಂದು ವರದಿಯಲ್ಲಿ ತಿಳಿಸಿದ್ದಾರೆ. ಹೀಗಿದ್ದರೂ, ಪ್ರಶ್ನೆಗೆ ಈ ತರಹ ಉತ್ತರ ಕೊಟ್ಟರೆ ನಾವೇನು ಮಾಡಬೇಕು ? ಆದುದರಿಂದ,